ಇ) ಈ ಕಾಮಗಾರಿಗಾಗಿ ಖರ್ಚಾಗಿರುವ ಹಣ ರೂ. 2.722 ಲಕ್ಷಗಳು ರಸ್ತೆ ಉದ್ದ 0.760 ಕಿ.ಮೀ.

ಈ) ಸರ್ಕಾರವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಜರುಗಿಸುತ್ತದೆ.

ಇ) ದಿನಾಂಕ 3. 5. 2000ದ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ರಾಜ್ಯದಲ್ಲಿರುವ ಉರ್ದುಶಾಲೆಗಳು.

361 (3495) ಶ್ರೀ ನಾಯಕ್. ಜೆ. ಡಿ (ಭಟ್ಕಳ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉರ್ದು ಪ್ರೌಢಶಾಲೆಯನ್ನು ಕನ್ನಡ ಪ್ರೌಢ ಶಾಲೆಯಿಂದ ಬೇರ್ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಎಂದು ಬೇರ್ಪಡಿಸಲಾಗುವುದು.

ಇ) ಅಂತಹ ಎಷ್ಟು ಪ್ರಕರಣಗಳು ಸರ್ಕಾರದ ಮುಂದೆ ನಿರ್ಣಯಕ್ಕೆ ಬಾಕಿ ಇರುತ್ತವೆ.

ಈ) ಹೊನ್ನಾವರ ತಾಲ್ಲೂಕಿನ ಮಾಕಿ ಗ್ರಾಮದ ಉರ್ದು ಪ್ರೌಢಶಾಲೆಯನ್ನು ಕನ್ನಡ ಪ್ರೌಢ ಶಾಲೆಯಿಂದ ಎಂದು ಬೇರ್ಪಡಿಸಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ

362 (3258) ಶ್ರೀ ಬಸವರಾಜ್ ಮಂಡಿಮಠ್. ಜಿ. (ಚಳ್ಳಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಿಸಲು ಏನಾದರೂ ಕಿಂಚಿತ್ತೂ ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

ಆ) ಕ್ರಮ ಕೈಗೊಂಡಿದ್ದರೆ ಎಷ್ಟು ಕಾಲದಲ್ಲಿ ಸದರಿ ಕಟ್ಟಡವನ್ನು ನಿರ್ಮಿಸಲಾಗುವುದು?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಚಳ್ಳಕೆರೆ ತಾಲ್ಲೂಕು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಿಸುವ ಕೆಲಸವನ್ನು ಕೈಗೆತ್ತಿಕೊಂಡಿರುವುದಿಲ್ಲ.

ಆ) ಈ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ.